ಕೆಲವು ವಿದ್ಯಾರ್ಥಿಗಳಂತೂ ಶಾಲೆಗೆ ಹೋಗಿ ಕಲಿಯುತ್ತಿರುವವರಲ್ಲಿ ಮೊದಲನೆಯ ಪೀಳಿಗೆಯವರಾಗಿರುತ್ತಾರೆ. ಅವರ ಮನೆಗಳಲ್ಲಿ ಈ ಹಿಂದೆ ಯಾರೂ ಶಾಲೆಗೆ ಹೋಗಿರುವುದೇ ಇಲ್ಲ. ಆದರೆ ಶಿಕ್ಷಣದ ಮೂಲಕ ಅವರೆಲ್ಲರ ಬದುಕಿನ ಸ್ಥಿತಿಗತಿಗಳನ್ನು ಸುಧಾರಿಸಲು ಸಾಧ್ಯವಿದೆ ಎಂಬುದನ್ನು ಗುರುತಿಸುವಲ್ಲಿ ಶಿಕ್ಷಕರ ಹಾಗೂ ಶಿಕ್ಷಕ ಶಿಕ್ಷಕರ ಪಾತ್ರ ಅತ್ಯಂತ ಮುಖ್ಯವಾದದ್ದು.

ಮಕ್ಕಳ ಕಲಿಕೆಯ ಮೇಲೆ ಕೌಟುಂಬಿಕ ಹಿನ್ನೆಲೆಯ ಪರಿಣಾಮ

ಮಕ್ಕಳ ಕುರಿತಾಗಿ ತಳಹಂತದಲ್ಲಿ ಇರುವ ನಂಬಿಕೆಗಳು

ಶಿಕ್ಷಕರು, ಶಿಕ್ಷಕ ಪ್ರಶಿಕ್ಷಕರು ಹಾಗೂ ಶೈಕ್ಷಣಿಕ ಅಧಿಕಾರಿಗಳ ಜೊತೆಗೆ ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆಲಸಗಳ ನಿಮಿತ್ತ ಒಡನಾಡುವ ಸಂದರ್ಭದಲ್ಲಿ ಮಕ್ಕಳ ಹಾಗೂ ಕಲಿಕೆಯ ಕುರಿತಾಗಿ ಸಾಮಾನ್ಯವಾದ ಅನೇಕ ನಂಬಿಕೆಗಳು ಇರುವುದು ಕಂಡುಬರುತ್ತದೆ. ಅವುಗಳಲ್ಲಿ ಕೆಲವನ್ನು ಪರಾಮರ್ಶಿಸೋಣ:

- ಮೂರು ತರಹದ ಮಕ್ಕಳಿದ್ದಾರೆ – ಬುದ್ಧಿವಂತ, ಸಾಧಾರಣ ಹಾಗೂ ಚುರುಕಲ್ಲದವರು. ಇಂತಹ ತೀವ್ರ ತರಹದ ವ್ಯತ್ಯಾಸಕ್ಕೆ ಮುಖ್ಯ ಕಾರಣ ಮಗುವಿನ ಕೌಟುಂಬಿಕ ಹಿನ್ನೆಲೆ.
- ಕೆಲವು ಮಕ್ಕಳು ಓದುವುದರಲ್ಲಿ ಮುಂದಿರುತ್ತಾರೆ; ಮತ್ತೆ ಕೆಲವರು ಇನ್ನಿತರ ಸಾಮಾನ್ಯ ದೈನಂದಿನ ಕೆಲಸಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಲು ಮಾತ್ರ ಸಮರ್ಥರಾಗಿರುತ್ತಾರೆ.
- ನಮ್ಮ ಶಾಲೆಗಳಿಗೆ ಬರುವ ಮಕ್ಕಳ ಕೌಟುಂಬಿಕ ಅಡಿಪಾಯವು ಚೆನ್ನಾಗಿಲ್ಲ.
- ಕೆಲವು ನಿರ್ದಿಷ್ಟ ಜಾತಿಗಳಿಗೆ ಸೇರಿದ ಮಕ್ಕಳು ಓದುವುದರಲ್ಲಿ ತುಂಬಾ ಹಿಂದಿರುತ್ತಾರೆ ಅಥವಾ ತುಂಬಾ ಮುಂದಿರುತ್ತಾರೆ.

ಈ ನಂಬಿಕೆಗಳು, ಮಕ್ಕಳ ಶಿಕ್ಷಣದ ಕುರಿತಾಗಿ ಕಾಳಜಿ ಹೊಂದಿರುವ, ಸರಿಯಾಗಿ ಆಲೋಚಿಸುವ ವ್ಯಕ್ತಿಗಳ ಮನಸ್ಸಿನಲ್ಲಿ ಈ ಕೆಳಗಿನ ಮೂಲಭೂತ ಪ್ರಶ್ನೆಗಳನ್ನು ತನ್ನಿಂದ ತಾನೇ ಹುಟ್ಟುಹಾಕಬೇಕು.

- ಎಲ್ಲಾ ಮಕ್ಕಳಿಗೂ ಎಲ್ಲಾ ರೀತಿಯಿಂದಲೂ ಕಲಿಯಲು ಸಮಾನ ಅವಕಾಶಗಳನ್ನು ನೀಡಿದರೆ, ಅವರು ಒಂದೇ ರೀತಿಯಲ್ಲಿ ಕಲಿಯಲು ಸಮರ್ಥರಾಗುತ್ತಾರೆಯೇ?
- ಮಗು ಕಲಿಕೆಯ ಪ್ರಕ್ರಿಯೆಯಲ್ಲಿ ಯಾವಾಗ ತೊಡಗಿಕೊಳ್ಳುತ್ತದೆ?
- ಕಲಿಕೆಗೆ ಎಂತಹ ವಾತಾವರಣವು ಅನುಕೂಲಕರ?
- 'ಬುದ್ಧಿವಂತಿಕೆ' ಅಂದರೆ ಏನು? ಮಕ್ಕಳ ಬುದ್ಧಿಮಟ್ಟಗಳಲ್ಲಿ ವ್ಯತ್ಯಾಸಗಳಿವೆಯೇ?
- ಆನುವಂಶಿಕ ಸಂಗತಿ ಎಷ್ಟರ ಮಟ್ಟಿಗೆ ಮನುಷ್ಯನ ಬುದ್ಧಿಮತ್ತೆಯನ್ನು ರೂಪಿಸುತ್ತದೆ? ವ್ಯಕ್ತಿಯ ಪರಿಸರದ ಕೊಡುಗೆ ಎಷ್ಟರ ಮಟ್ಟಿಗೆ ಇರುತ್ತದೆ?
- ಯಾವ ಮಕ್ಕಳನ್ನು ಬೇಗ ಕಲಿಯುವವರು ಎಂದು ಕರೆಯಬಹುದು ಮತ್ತು ಹಾಗೆ ಯಾವ ಆಧಾರದ ಮೇಲೆ ಕರೆಯಬಹುದು?

ಕೊಟ್ರೇಶಿಯ ಕನಸು

'ಕೊಟ್ರೇಶಿ ಕನಸು' ಎನ್ನುವುದು 1994 ರಲ್ಲಿ ವಿಮರ್ಶಕರ ಮೆಚ್ಚುಗೆ ಪಡೆದ ಕನ್ನಡ ಚಲನಚಿತ್ರ. ಇದು ಕುಂ. ವೀರಭದ್ರಪ್ಪ ಅವರ 'ಕೊಟ್ರೇಶಿ ಹೈಸ್ಕೂಲಿಗೆ ಸೇರಿದ್ದು' ಎಂಬ ಕಾದಂಬರಿಯನ್ನು ಆಧರಿಸಿದೆ. ನ್ಯಾಯ-ಸಮಾನತೆಗಳ ಸೂಕ್ಷ್ಮ ಸಂಗತಿಯನ್ನು ಸಶಕ್ತವಾಗಿ ನಿಭಾಯಿಸುತ್ತದೆ. ನಾಗತಿಹಳ್ಳಿ ಚಂದ್ರಶೇಖರ್ ಅವರು ಈ ಚಿತ್ರದ (ಅವರೂ ಕೂಡ ಲೇಖಕರಾದ ಕುಂ.ವೀರಭದ್ರಪ್ಪನವರಂತೆ ಶಿಕ್ಷಕರಾಗಿ ಅನುಭವವುಳ್ಳವರು) ನಿರ್ದೇಶಕರು. ಈ ಚಲನಚಿತ್ರವು ಎರಡು ರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿದೆ. ಒಂದು, ಅತ್ಯುತ್ತಮ ಕನ್ನಡ ಚಲನಚಿತ್ರ ಪ್ರಶಸ್ತಿ. ಮತ್ತೊಂದು, ಅತ್ಯುತ್ತಮ ಬಾಲಕಲಾವಿದ ಪ್ರಶಸ್ತಿ (ವಿಜಯ್ ರಾಘವೇಂದ್ರ). ಇದು ಬುದ್ಧಿವಂತ ಹುಡುಗನೊಬ್ಬನ ತೀವ್ರ ಹೋರಾಟ, ಕೆಳಜಾತಿಗೆ ಸೇರಿದ ಅವನ ಕಡುಬಡವ ತಂದೆತಾಯಿ ಹಾಗೂ ಅವರ ಸಮುದಾಯವು ಊರಿನ ಮುಖ್ಯಸ್ಥ ಗೌಡನು ಮಾಡುವ ಪ್ರಬಲವಾದ ಒಳಸಂಚಿನ ಹಿನ್ನೆಲೆಯಲ್ಲಿ ಹುಡುಗನನ್ನು ಪ್ರೌಢಶಾಲಾ ಮಟ್ಟದಲ್ಲಿ ಓದಿಸಲು ಹೆಣಗಾಡಿದ್ದನ್ನು ಹಾಗೂ ಕೇವಲ ತನ್ನ ಆರ್ಥಿಕ ಹಾಗೂ ರಾಜಕೀಯ ಬಲದಿಂದ ಹುಡುಗನ ಏಳಿಗೆಯನ್ನು ಮಟ್ಟಹಾಕಲು ಗೌಡನು ಪಡುವ

ಪ್ರಯತ್ನಗಳನ್ನು (ಚೆನ್ನಾಗಿ ಓದುತ್ತಿರದ ಅವನದೇ ಮಗನ ಮೂಲಕ ಇದನ್ನು ತೋರಿಸಲಾಗಿದೆ) ಚಿತ್ರಿಸುತ್ತದೆ. ವಿಪರ್ಯಾಸವೆಂದರೆ, ಕೊಟ್ರೇಶಿ ದಾಖಲಾತಿ ಪಡೆಯಲು ಪ್ರಯತ್ನಿಸುವ ಶಾಲೆಗೇ ಗೌಡನು ಹಣವನ್ನು ನೀಡುವುದು ಹಾಗೂ ಅದರಿಂದಾಗಿಯೇ ಶಾಲಾ ಆಡಳಿತವು ಒಂದಲ್ಲ ಒಂದು ನೆಪವೊಡ್ಡಿ ಹುಡುಗನಿಗೆ ದಾಖಲಾತಿ ನಿರಾಕರಿಸುವಂತೆ ಮಾಡುವಲ್ಲಿ ಸಫಲವಾಗುವುದು. ತಮ್ಮ ಮಗನನ್ನು ಓದಲು ಕಳುಹಿಸುವಂತೆ ಕೊಟ್ರೇಶಿಯ ಅನಕ್ಷರಸ್ಥ ತಂದೆತಾಯಿಗಳ ಮನವೊಲಿಸುವ ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ದಿನನಿತ್ಯದ ಜೀವನಕ್ಕೆ ಬೇಕಾದ ಸಾಮಾನು ಸರಂಜಾಮುಗಳನ್ನು ಒದಗಿಸುವುದನ್ನೂ ಆತ ನಿಲ್ಲಿಸಿಬಿಡುತ್ತಾನೆ ಹಾಗೂ ಕೊಟ್ರೇಶಿಯ ಕುಟುಂಬಕ್ಕೆ ಪಾಠ ಕಲಿಸಲು ಅವರ ಗುಡಿಸಲಿಗೆ ಬೆಂಕಿ ಹಚ್ಚಿಸಿ, ಸುಡಿಸುತ್ತಾನೆ. ಕೊನೆಯಲ್ಲಿ, ಆತ್ಮಸಾಕ್ಷಿಯುಳ್ಳ ಹಾಗೂ ಕಾನೂನುಗಳನ್ನು ಕಾರ್ಯಗತಗೊಳಿಸುವ ಪೋಲೀಸ್ ಅಧಿಕಾರಿಯು ಮಧ್ಯಪ್ರವೇಶಿಸಿ, ಗೌಡನ ಶೋಷಣೆಗೆ ತಡೆಯೊಡ್ಡುವ ಮೂಲಕ ಹಾಗೂ ಕೊಟ್ರೇಶಿಯ ತಂದೆಯು ಉಪವಾಸವನ್ನು ಮುರಿದು, ಮೊದಲು ತನ್ನ ಮಗನಿಗೆ ದಾಖಲಾತಿಯನ್ನು ನಿರಾಕರಿಸಿದ ಶಾಲೆಯಲ್ಲಿಯೇ ಅವನನ್ನು ಸೇರಿಸುವುದರ ಮೂಲಕ ಕೊಟ್ರೇಶಿಯ ಕುಟುಂಬದ ಹಾಗೂ ಅವರ ಕಡೆಯವರ ಬೆಂಬಲಿಗರ ಹೋರಾಟಗಳು ಫಲಪ್ರದವಾಗುತ್ತವೆ. ಆದಾಗ್ಯೂ ಆಳವಾಗಿ ಬೇರೂರಿದ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯು ಕಾನೂನನ್ನು ಹೇಗೆ ಧಿಕ್ಕರಿಸುತ್ತದೆ ಮತ್ತು ಪ್ರಬಲ–ದುರ್ಬಲ ವರ್ಗಗಳ ನಡುವೆ ಇರುವ ಶಕ್ತಿಯ ಸಮೀಕರಣವು ಬದಲಾಗದಂತೆ ದುರ್ಬಲ ವರ್ಗದವರ ಮೇಲಿನ ತನ್ನ ಬಲವಾದ ಹಿಡಿತವನ್ನು ಉಳಿಸಿಕೊಳ್ಳಲು ಪ್ರಬಲವರ್ಗವು ಹೇಗೆ ಪ್ರಯತ್ನಿಸುತ್ತದೆ ಎಂಬುದು ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಉಳಿದುಬಿಡುತ್ತದೆ.

ಚಿನ್ನಾರಿ ಮುತ್ತ

'ಚಿನ್ನಾರಿ ಮುತ್ತ' ಎಂಬ ಮತ್ತೊಂದು ಸುಂದರವಾದ ಮಕ್ಕಳ ಚಲನಚಿತ್ರವಿದೆ. ಖ್ಯಾತ ಕವಿ ಹಾಗೂ ನನ್ನ ಸಾಹಿತ್ಯಿಕ ಗುರು ಎಚ್.ಎಸ್.ವೆಂಕಟೇಶಮೂರ್ತಿ ಅವರು ಬರೆದ ಹಾಡೊಂದು ಈ ಚಿತ್ರದಲ್ಲಿದೆ. ಎಲ್ಲ ಪ್ರಭೇದಗಳಿಗೆ ಸೇರಿದ ಜೀವಿಗಳಿಗೂ ಅವು ಹೊಂದಿರುವ ಅಗತ್ಯ ಸಾಮರ್ಥ್ಯಕ್ಕೆ ಸರಿಯಾಗಿ ಏಳಿಗೆ ಹೊಂದಲು ಅನುಕೂಲಕರವಾದ ವಾತಾವರಣವಿರಬೇಕು ಎನ್ನುವುದನ್ನು ಈ ಹಾಡು ಒತ್ತಿ ಹೇಳುತ್ತದೆ. ಪ್ರಕೃತಿಯಲ್ಲಿನ ವಿವಿಧ ಪ್ರತಿಮೆಗಳನ್ನು ಬಳಸಿಕೊಳ್ಳುವುದರ ಜೊತೆಗೆ ಈ ಹಾಡು ಕೆಲವು ಚಿಂತನಾರ್ಹ ಪ್ರಶ್ನೆಗಳನ್ನೂ ಎತ್ತುತ್ತದೆ. ಹಕ್ಕಿಗೆ ರೆಕ್ಕೆಗಳಿದ್ದರೆ ಸಾಕೆ? ಹಾರಲು ಆಕಾಶವೂ ಬೇಡವೇ? ಜಿಂಕೆಗೆ ಕಾಲುಗಳಿದ್ದರೆ

ಸಾಕೆ? ಕುಣಿದಾಡಲು ಕಾಡು ಬೇಡವೇ? ಹೂವಿಗೆ ಪರಿಮಳವಿದ್ದರೆ ಸಾಕೆ? ಅದನ್ನು ಹರಡಲು ಗಾಳಿಯು ಬೇಡವೇ? ಜೇನುಹುಳಕ್ಕೆ ಬಾಯಿಯಿದ್ದರೆ ಸಾಕೆ? ಮಕರಂದವನ್ನು ಹೀರಲು ಹೂವುಗಳು ಬೇಡವೇ? ಮೋಡಗಳಿಗೆ ಮಳೆ ಸುರಿಸಲು ಭೂಮಿ ಬೇಡವೇ ...? ತೊರೆಗೆ ಹರಿಯಲಾರಂಭಿಸುವ ಮೊದಲು ಕೊಳವೊಂದು ಬೇಡವೇ....? ಹೀಗೇ.

ಬಹಳಷ್ಟು ವಿದ್ಯಾರ್ಥಿಗಳು ತೀವ್ರ ನಿರ್ಬಂಧಗಳನ್ನು ಹೇರುವ ಹಿನ್ನೆಲೆಗಳಿಂದ ಬಂದವರಾಗಿರುತ್ತಾರೆ. ಕೆಲವರಂತೂ ಶಾಲೆಗೆ ಹೋಗಿ ಕಲಿಯುತ್ತಿರುವವರಲ್ಲಿ ಮೊದಲನೆಯ ಪೀಳಿಗೆಯವರಾಗಿರುತ್ತಾರೆ. ಅವರ ಮನೆಗಳಲ್ಲಿ ಈ ಹಿಂದೆ ಯಾರೂ ಶಾಲೆಗೆ ಹೋಗಿರುವುದೇ ಇಲ್ಲ. ಆದರೆ ಶಿಕ್ಷಣದ ಮೂಲಕ ಅವರೆಲ್ಲರ ಬದುಕಿನ ಸ್ಥಿತಿಗತಿಗಳನ್ನು ಸುಧಾರಿಸಲು ಸಾಧ್ಯವಿದೆ ಎಂಬುದನ್ನು ಗುರುತಿಸುವಲ್ಲಿ ಶಿಕ್ಷಕರ ಹಾಗೂ ಶಿಕ್ಷಕ ಶಿಕ್ಷಕರ ಪಾತ್ರ ಅತ್ಯಂತ ಮುಖ್ಯವಾದದ್ದು ಎನ್ನುವುದು ಮೇಲಿನ ವಿಶ್ಲೇಷಣೆಯಿಂದ ಕಂಡುಬಂದಿರುವ ಅಂಶ.

ಮಾಧುರಿಯ ಸ್ಫೂರ್ತಿದಾಯಕ ಕಥೆ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಐನಹಳ್ಳಿಯ ಸಾಮಾನ್ಯ ಗ್ರಾಮೀಣ ಬಾಲಕಿಯಾದ ಮಾಧುರಿಯು ಇತ್ತೀಚೆಗೆ ತೋಟಗಾರಿಕೆಯಲ್ಲಿ ಸ್ನಾತಕೋತ್ತರ ಪದವಿಗೆ ದಾಖಲಾತಿಯನ್ನು ಪಡೆದ ಕಥೆಯು ನಿಜಕ್ಕೂ ಆಶಾದಾಯಕವಾದುದು. ಇತ್ತೀಚೆಗೆ ಅಂಬಲಗೆರೆ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜಾಚಾರ್ ಅವರು (ಸೇವಾನಿರತ ಶಿಕ್ಷಕರಿಗಾಗಿ ಮಾಡ್ಯೂಲ್‌ಗಳನ್ನು ತಯಾರಿಸುವ ಸಂಬಂಧ, ನಾನು ಅವರ ಜೊತೆಗೆ ಇತ್ತೀಚೆಗೆ ಕೆಲಸ ಮಾಡಿದ್ದೆ. –ಲೇ.) ಅವಳ ಯಶೋಗಾಥೆಯನ್ನು ಹೇಳಿದರು. ಅವಳು ಅದೇ ಶಾಲೆಯಲ್ಲಿ ತನ್ನ ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸವನ್ನು ಯಶಸ್ವಿಯಾಗಿ ಮುಗಿಸಿದ್ದಳು. ಕಷ್ಟಕರವಾದ ಕೌಟುಂಬಿಕ ಹಿನ್ನೆಲೆಯಿದ್ದಾಗ್ಯೂ ಪರಿಸರವು ವಿದ್ಯಾರ್ಥಿಯ ಜೀವನವನ್ನು ರೂಪಿಸುವಲ್ಲಿ ಹೇಗೆ ಮಹತ್ವದ ಪಾತ್ರವನ್ನು ವಹಿಸಬಲ್ಲುದು ಎಂಬ ದೃಷ್ಟಿಯಿಂದ ಮಾಧುರಿಯ ಕಥೆಯು ಕುತೂಹಲಕರವಾಗಿದೆ.

ಅವಳಂತಹ ಹಲವಾರು ಹುಡುಗಿಯರ ಹಾಗೆಯೇ ಮಾಧುರಿ ದೊಡ್ಡದೊಂದು ಅವಿಭಕ್ತ ಕುಟುಂಬದಲ್ಲಿ ಬೆಳೆದಳು. ಹತ್ತನೆಯ ತರಗತಿಯವರೆಗೆ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿದಳು. ಪ್ರೌಢಶಾಲೆಯಲ್ಲಿದ್ದಾಗ ಅವಳು ವಿಜ್ಞಾನದ ಬಗ್ಗೆ ಗಾಢ ಆಸಕ್ತಿಯನ್ನು ಬೆಳೆಸಿಕೊಂಡಳು ಹಾಗೂ ತಾನೇ ಪ್ರಾಯೋಗಿಕ ಮಾದರಿಗಳನ್ನು ನಿರ್ಮಿಸಿಕೊಂಡು ತಾಲ್ಲೂಕು ಮತ್ತು ಜಿಲ್ಲಾಮಟ್ಟದ

ಹಲವಾರು ವಿಜ್ಞಾನ ಪ್ರದರ್ಶನಗಳಲ್ಲಿ ಭಾಗವಹಿಸಿದಳು. ಪದವಿಪೂರ್ವ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಬರಬೇಕಾದ ಅವಳು ತನ್ನ ಸೋದರಮಾವನ ಮನೆಯಲ್ಲಿದ್ದು ಓದಿದಳು. ಈ ಹಂತದಲ್ಲಿ ಅವಳು ನಗರದಲ್ಲಿಯೇ ಹುಟ್ಟಿ ಬೆಳೆದ ವಿದ್ಯಾರ್ಥಿಗಳೊಡನೆ ಕಾಲೇಜಿನಲ್ಲಿ ಸ್ಪರ್ಧಿಸಬೇಕಾದ ಕಾರಣ ಗಂಭೀರವಾದ ಸವಾಲುಗಳನ್ನು ಎದುರಿಸಿದಳು. ತನ್ನ ದೃಢಚಿತ್ತತೆ, ಕಠಿಣ ಪರಿಶ್ರಮ, ಕುಟುಂಬದವರ ಬೆಂಬಲ ಹಾಗೂ ನಿಕಟ ಪರಿಸರದ ಸಹಾಯದಿಂದ ಅವಳು ತನ್ನ ಕೀಳರಿಮೆಯನ್ನು ಗೆದ್ದು ವಿಜ್ಞಾನದಲ್ಲಿ ಅಧ್ಯಯನವನ್ನು ಮುಂದುವರೆಸಿದಳು. ಪದವಿಪೂರ್ವ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಶೇಕಡಾವಾರು ಅಧಿಕ ಅಂಕಗಳನ್ನು ಪಡೆಯುವುದರೊಂದಿಗೆ ತನ್ನ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದಳು.

ಯಾವುದಾದರೊಂದು ಎಂಜಿನಿಯರಿಂಗ್ ಅಥವಾ ವೈದ್ಯಕೀಯ ಕಾಲೇಜಿನಲ್ಲಿ ಸುಲಭವಾಗಿ ದಾಖಲಾತಿ ಸಿಕ್ಕುವಂತಿದ್ದರೂ ಅವಳು ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ತೋಟಗಾರಿಕೆ ವಿಷಯದಲ್ಲಿ ನಾಲ್ಕು ವರ್ಷ ಅವಧಿಯ ಬಿಎಸ್‌ಸಿ ಪದವಿ ಓದುವುದನ್ನೇ ಆಯ್ದುಕೊಂಡಳು. ಅವಳು ಓದಿದ ಕಾಲೇಜು ಹಿರಿಯೂರಿನಲ್ಲಿತ್ತು. ಕೃಷಿ ಕುಟುಂಬದಿಂದ ಬಂದವಳು. ಇಪ್ಪತ್ತು ಹೆಕ್ಟೇರುಗಳಷ್ಟು ಜಮೀನನ್ನು ಹೊಂದಿರುವ ಅವಳ ತಂದೆ ಪ್ರಕಾಶ್, ತನ್ನ ದೊಡ್ಡ ಕುಟುಂಬದ ಜೊತೆ ಜಂಟಿಯಾಗಿ ಅಡಿಕೆ ಮತ್ತು ತೆಂಗನ್ನು ಬೆಳೆಯುವವರು. ಹೀಗಾಗಿ ಅವಳು ತನ್ನ ಕುಟುಂಬಕ್ಕೊಂದೇ ಅಲ್ಲ, ಒಟ್ಟಾರೆ ಕೃಷಿ ಸಮುದಾಯಕ್ಕೇ ತನ್ನ ಕೊಡುಗೆಯನ್ನೀಯಲು ಬಯಸಿದಳು. ಅವಳ ಕುಟುಂಬವಲ್ಲದೇ ಅವಳ ಪ್ರೌಢಶಾಲಾ ಮುಖ್ಯೋಪಾಧ್ಯಾಯರೂ ಕೂಡ ಅವಳ ಆಯ್ಕೆಗೆ ಬೆಂಬಲವಾಗಿ ನಿಂತರು. ಪದವಿಯನ್ನು ಓದುತ್ತಿದ್ದ ಅವಧಿಯಲ್ಲಿ ಅವಳು ಒಮ್ಮೆ ಸೋದರಮಾವನ ಮನೆಯಲ್ಲಿ ಇರಬೇಕಾಗಿ ಬಂದರೆ ಮತ್ತೊಮ್ಮೆ ಹಿರಿಯೂರಿನ ವಿದ್ಯಾರ್ಥಿನಿಲಯದಲ್ಲಿ ಇರಬೇಕಾಗಿ ಬರುತ್ತಿತ್ತು. ಶಿವಮೊಗ್ಗದಲ್ಲಿ ನಡೆದ ವಿಶ್ವವಿದ್ಯಾಲಯದ ಪದವಿ ಪ್ರದಾನ ಸಮಾರಂಭದಲ್ಲಿ ನಾಲ್ಕು ಸ್ವರ್ಣಪದಕಗಳನ್ನು ಪಡೆದುಕೊಳ್ಳುವುದರೊಂದಿಗೆ ಪದವಿಯ ಹಂತದಲ್ಲಿ ಮತ್ತೆ ಯಶಸ್ವಿಯಾಗಿ ಹೊರಹೊಮ್ಮಿದಳು. ನಂತರ, ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಗೆ ದಾಖಲಾತಿಯನ್ನು ಪಡೆದಳು. ತೋಟಗಾರಿಕೆ ವಿಷಯದಲ್ಲಿ ವಿಜ್ಞಾನಿಯಾಗುವ ಕನಸನ್ನು ಹೊಂದಿರುವ ಅವಳು ಕಡಿಮೆ ವೆಚ್ಚದಲ್ಲಿ ಉತ್ತಮ ಇಳುವರಿಯನ್ನು ನೀಡುವ ವಿವಿಧ ತರಕಾರಿ ಬೆಳೆಗಳನ್ನು ಬೆಳೆಯಲು ಕೃಷಿಕರಿಗೆ ನೆರವಾಗುವ ಉದಾತ್ತ ಆಲೋಚನೆಗಳನ್ನು ಹೊಂದಿದ್ದಾಳೆ.

ಇತ್ತೀಚಿನ ಅಧ್ಯಯನವೊಂದರಿಂದ ಪಡೆದ ಒಳನೋಟಗಳು*

ಇತ್ತೀಚೆಗೆ ಯಾದಗಿರಿ ಜಿಲ್ಲೆಯ ಶೋರಾಪುರ ತಾಲೂಕಿನಲ್ಲಿ ಅಧ್ಯಯನವೊಂದನ್ನು ಕೈಗೊಳ್ಳಲಾಯಿತು. ಪ್ರಾಥಮಿಕ ಹಾಗೂ ಅದಕ್ಕೂ ಮೇಲಿನ ಮಟ್ಟಗಳಲ್ಲಿ ಹೆಣ್ಣು ಮಕ್ಕಳು ಶಿಕ್ಷಣವನ್ನು ಮುಂದುವರೆಸುವಲ್ಲಿ ಉಳಿದೆಲ್ಲ ಅಂಶಗಳ ಜೊತೆಗೆ ಮೊದಲನೆಯದಾಗಿ ತಾಯಂದಿರ ಸಾಕ್ಷರತೆ, ನಂತರ ತಂದೆಯರ ಸಾಕ್ಷರತೆಗಳು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ ಎನ್ನುವುದನ್ನು ಈ ಅಧ್ಯಯನವು ಸೂಚಿಸುತ್ತದೆ. ಬಡತನ ಹಾಗೂ ನಿರುದ್ಯೋಗಗಳು ದುರ್ಬಲ ವರ್ಗದವರು ಶಿಕ್ಷಣ ಪಡೆಯುವುದರ ವಿರುದ್ಧವಾಗಿ ಕೆಲಸ ಮಾಡುತ್ತವೆಯಾದರೂ ಮಹಿಳಾ ಸಾಕ್ಷರತೆಯೂ ಸೇರಿದಂತೆ ಸಾಮಾಜಿಕ ಅಭಿವೃದ್ಧಿಯ ಕೊರತೆಯು ಹೆಚ್ಚು ಪ್ರಬಲವಾದ ಅಂಶವಾಗಿದೆ.

ಬೇರೆ ಬೇರೆ ಜಿಲ್ಲೆಗಳಲ್ಲಷ್ಟೇ ಅಲ್ಲದೆ ಬೇರೆ ಬೇರೆ ತಾಲ್ಲೂಕುಗಳಲ್ಲಿಯೂ ಸಾಮಾಜಿಕ–ಆರ್ಥಿಕ ಸಂದರ್ಭಗಳು ವಿಭಿನ್ನವಾಗಿರುತ್ತವೆ. ಹಾಗಿದ್ದರೂ ಹಲವಾರು ಸ್ಥಳಗಳಲ್ಲಿ ಒಂದೇ ತರಹದ ಸ್ಥಿತಿ–ಗತಿಗಳು ಇರಲು ಸಾಧ್ಯ. ಶಿಕ್ಷಕರು ತಮ್ಮ ತರಗತಿಯಲ್ಲಿನ ಪ್ರತಿಯೊಂದು ಮಗುವಿನ ನಿರ್ದಿಷ್ಟ ಸಾಮಾಜಿಕ–ಆರ್ಥಿಕ ಹಿನ್ನೆಲೆಯನ್ನು ತಿಳಿದಿರಬೇಕು ಹಾಗೂ ಸಾಧ್ಯವಾದಷ್ಟೂ ಮಗುವಿಗೆ ಬೆಂಬಲವನ್ನೊದಗಿಸಲು ಪ್ರಯತ್ನಿಸಬೇಕು. ಅವಕಾಶವಂಚಿತ ಕುಟುಂಬಗಳ ಹಿನ್ನೆಲೆಯಿಂದ ಬರುವ ಮಕ್ಕಳಿಗೆ ಅನುಕೂಲಸ್ಥ ಕುಟುಂಬಗಳಿಂದ ಬರುವ ಮಕ್ಕಳಿಗಿಂತ ಹೆಚ್ಚಿನ ಗಮನದ ಅಗತ್ಯವಿದೆ ಎನ್ನುವುದು ಸ್ಪಷ್ಟ. ಇದು ಸರ್ಕಾರವು ನಡೆಸುವ ಶಾಲೆಗಳಿಗಷ್ಟೇ ಅಲ್ಲ, ಶಿಕ್ಷಣ ಹಕ್ಕು ಕಾಯ್ದೆ ಜಾರಿಯಾದ ನಂತರದಲ್ಲಿ ವಿವಿಧತೆಯು ಹೆಚ್ಚಿರುವ ಖಾಸಗಿ ಸಂಸ್ಥೆಗಳಿಗೂ ಅನ್ವಯಿಸುತ್ತದೆ.

ಮಕ್ಕಳು ಹೇಗೆ ಬೆಳೆಯುತ್ತಾರೆ ಮತ್ತು ಕಲಿಯುತ್ತಾರೆ ಎಂಬುದರ ಬಗ್ಗೆ ತಾವು ಹೊಂದಿರುವ ನಂಬಿಕೆಗಳನ್ನು ಅಗತ್ಯವಿದ್ದಲ್ಲೆಲ್ಲ ಪ್ರಶ್ನಿಸಿಕೊಳ್ಳುವುದು, ಅವುಗಳನ್ನು ಮರುರೂಪಿಸಿಕೊಳ್ಳುವುದು ಹಾಗೂ ಮಕ್ಕಳಿಗೆ ತಮ್ಮ ಆನುವಂಶಿಕ ಅಥವಾ ನೈಸರ್ಗಿಕ ಮಿತಿಗಳನ್ನು ಜಯಿಸಲು ಬೇಕಾದ ಬೆಂಬಲದ ವಾತಾವರಣವನ್ನು ಒದಗಿಸುವುದು, ಇವು ಶಿಕ್ಷಕರು ಮತ್ತು ಶಿಕ್ಷಕ ಶಿಕ್ಷಕರು ಮನಃಪೂರ್ವಕವಾಗಿ ತೆಗೆದುಕೊಳ್ಳಬೇಕಾದ ಕೆಲವು ಮುಖ್ಯ ಜವಾಬ್ದಾರಿಗಳು.

* V Santhakumar, Namita Gupta and Ramamurthy Sripada, 'Schooling for All - Can We Neglect the Demand?', Oxford University Press, 2016.

ಈ ಲೇಖನವನ್ನು ಯಹೂದಿ ಗುರು ಬೋನಮ್‌ನ ದೃಷ್ಟಾಂತದೊಂದಿಗೆ ಮುಗಿಸುವುದು ಸೂಕ್ತವಾಗಬಹುದು.

ವರ್ಷಾನುಗಟ್ಟಲೇ ನೂರಾರು ಶಿಷ್ಯರಿಗೆ ಮಾರ್ಗದರ್ಶನ ಮಾಡಿದ ಆತ ವರ್ಷಗಳುರುಳಿದ ಹಾಗೆ ಸಾಕಷ್ಟು ವೃದ್ಧನಾಗಿದ್ದ. ಒಂದು ದಿನ, ಅವನ ಶಿಷ್ಯರು ತಮ್ಮ ಜೀವನದುದ್ದಕ್ಕೂ ನಿರಂತರವಾಗಿ ಮಾರ್ಗದರ್ಶನ ಮಾಡಬಲ್ಲಂತಹ ಸಂದೇಶವೊಂದನ್ನು ನೀಡುವಂತೆ ಅವನನ್ನು ಕೇಳಿಕೊಂಡರು. ಅವರತ್ತ ನಗೆಯೊಂದನ್ನು ಬೀರಿದ ಬೋನಮ್ ತಾನು ಸತ್ತ ನಂತರ ಅದನ್ನು ನೀಡುವುದಾಗಿ ಅವರಿಗೆ ತಿಳಿಸಿದ. ಗೊಂದಲಕ್ಕೊಳಗಾದ ಅವನ ಶಿಷ್ಯರು, ಅದು ಹೇಗೆ ಆಗುವುದೆಂದು ತಿಳಿಯಲು ಬಯಸಿದರು. ಮಹತ್ವದ ಸಂದೇಶವನ್ನು ತನ್ನ ಮರಣದ ನಂತರವೇ ತಾನು ಬಿಟ್ಟುಹೋಗುವುದಾಗಿಯೂ ಮರಣ ಸಂಭವಿಸಿದಾಗ ಅವರದನ್ನು ತನ್ನ ಅಂಗೈಗಳಲ್ಲಿ ಕಾಣಬೇಕೆಂತಲೂ ಅವರಿಗೆ ಅಭಯವನ್ನಿತ್ತ.

ಬೋನಮ್‌ನ ಸಂದೇಶ

ಮುಂದೆ ನಿರೀಕ್ಷಿಸಿದಂತೆಯೇ ಕೆಲವು ತಿಂಗಳುಗಳ ಕಾಲದಲ್ಲಿ ಬೋನಮ್ ತೀರಿಕೊಂಡ. ಅವನ ಶಿಷ್ಯರು ಸಹಜವಾಗಿಯೇ ದುಃಖಿತರಾದರು. ಆದರೆ, ತನ್ನ ಹಿಂದೆ ಅವರಿಗಾಗಿ ಆತ ಬಿಟ್ಟುಹೋದ ಸಂದೇಶವೇನೆಂದು ಬಿಚ್ಚಿ ನೋಡಲೂ ಅವರು ಕಾತರರಾಗಿದ್ದರು. ಅವರಲ್ಲೊಬ್ಬ ಬುದ್ಧಿವಂತ ಶಿಷ್ಯನು ಸತ್ತು ಹೋದ ಗುರುವಿನ ಸಮೀಪ ಕುಳಿತುಕೊಂಡು, ಬಿಗಿದುಕೊಂಡಿದ್ದ ಗುರುವಿನ ಎರಡೂ ಅಂಗೈಗಳನ್ನು ಬಿಡಿಸಿದ. ಎರಡರಲ್ಲಿಯೂ ಒಂದೊಂದು ಚೀಟಿಯಿತ್ತು. ಎಡಗೈನಲ್ಲಿದ್ದ ಚೀಟಿಯಲ್ಲಿ, 'ನಾನು ಕೇವಲ ಮಣ್ಣು' ಎಂದು ಬರೆದಿದ್ದರೆ ಬಲಗೈನಲ್ಲಿದ್ದ ಚೀಟಿಯಲ್ಲಿ, 'ಇಡೀ ಪ್ರಪಂಚವನ್ನು ನನಗಾಗಿ ನಿರ್ಮಿಸಲಾಗಿದೆ,' ಎಂದು ಬರೆದಿತ್ತು. ಸ್ಪಷ್ಟವಾಗಿಯೂ ಅಲ್ಲಿ ದೊಡ್ಡದೊಂದು ವಿರೋಧಾಭಾಸವು ಸೃಷ್ಟಿಯಾಗಿತ್ತು! ಮತ್ತೊಬ್ಬ ಚತುರ ಶಿಷ್ಯನು ಆ ಎರಡೂ ಚೀಟಿಗಳನ್ನು ಸೇರಿಸಿ, ತಿರುವಿಹಾಕಿದನು. ಆಗ ಸ್ಪಷ್ಟವಾದ ಟಿಪ್ಪಣಿಯೊಂದು ಕಾಣಸಿಕ್ಕಿತು–

> 'ಪ್ರೀತಿಯ ವಿದ್ಯಾರ್ಥಿಗಳೇ, ನನ್ನ ಎಡಗೈನಲ್ಲಿ ಉಲ್ಲೇಖಿಸಿದ್ದು ವಾಸ್ತವ; ಅದರಲ್ಲಿ ಅಸಾಧಾರಣವಾದುದೇನೂ ಇಲ್ಲ. ವ್ಯಕ್ತಿಯೊಬ್ಬ ನಿರಾಶಾವಾದಿಯಾದರೆ, ಅವನು ಬರೀ ಮಣ್ಣಾಗಿಯೇ ಉಳಿದುಬಿಡುತ್ತಾನೆ. ಆದರೆ, ನನ್ನ ಬಲಗೈಯಲ್ಲಿರುವ ಚೀಟಿಯು ಸಾಧ್ಯತೆಯೊಂದನ್ನು ಸೂಚಿಸುತ್ತದೆ. ವ್ಯಕ್ತಿಯೊಬ್ಬ ತನ್ನ ಸಂಪೂರ್ಣ

ಸಾಮರ್ಥ್ಯ ಹಾಗೂ ಬುದ್ಧಿಶಕ್ತಿಯನ್ನು ಬಳಸಿಕೊಂಡು ಬೆಳೆದರೆ, ಇಡೀ ಪ್ರಪಂಚವು ಅವನಿಗಾಗಿ ತೆರೆದುಕೊಳ್ಳುತ್ತದೆ. ಜೀವನವು ಕೇವಲ ವಾಸ್ತವದಿಂದ ಸಾಧ್ಯತೆಯೆಡೆಗಿನ ಪ್ರಯಾಣ ಮಾತ್ರ.'

ಬೋನಮ್‌ನ ಅಂತಿಮ ಸಂದೇಶವು, ವಿಶೇಷವಾಗಿ ಮಕ್ಕಳು ಮತ್ತು ಕಲಿಕೆಯ ಮೇಲೆ ಯಾವುದು ಪರಿಣಾಮ ಬೀರುತ್ತದೆ ಎನ್ನುವುದರ ಕುರಿತಾಗಿ ಶಿಕ್ಷಕರು ಹಾಗೂ ಶಿಕ್ಷಕ ಶಿಕ್ಷಕರು ಸಮಾನವಾಗಿ ಹೊಂದಿರುವ ಕೆಲವು ಆಳವಾದ ನಂಬಿಕೆಗಳ ಸಂದರ್ಭದಲ್ಲಿ ಅತ್ಯಂತ ಶಕ್ತಿಯುತವಾದುದು.

■

ಬಿ ಫಸ್ಟ್, 20–02–2017



17ನೇ ಮಾರ್ಚ್ 2010– ಕಾಸರಗೋಡಿನ ಮೂಡಂಬೈಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಂತಸದಾಯಕ ಮಕ್ಕಳು. ಈ ಶಿಶುಸ್ನೇಹಿ ಕನ್ನಡ ಮಾಧ್ಯಮ ಶಾಲೆಯಲ್ಲಿ ಮಕ್ಕಳ ಹಕ್ಕುಗಳನ್ನು ಪೂರ್ಣವಾಗಿ ಅಂಗೀಕರಿಸಲಾಗಿದ್ದು ಮಕ್ಕಳನ್ನು ಮಾನಸಿಕವಾಗಿ ಹಾಗೂ ಶಾರೀರಿಕವಾಗಿ ಶಿಕ್ಷಿಸಲಾಗುವುದಿಲ್ಲ ಎಂಬುದು ಘೋಷಿಸಿ ಪಾಲಿಸುತ್ತಿರುವ ಅಂಶಗಳಲ್ಲಿ ಒಂದಾಗಿದೆ.